ವಿಷಯ ಸಂಕೇತ : 85K

2024 – 25 ನೇ ಸಾಲಿನ ಎಸ್.ಎಸ್.ಎಲ್.ಸಿ. ಸಂಕಲನಾತ್ಮಕ ಮೌಲ್ಯಮಾಪನ - 1

# ಸಮಾಜ ವಿಜ್ಞಾನ

(ಕನ್ನಡ ಆವೃತ್ತಿ)

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.15 ರವರೆಗೆ] [ಗರಿಷ್ಠ ಅಂಕಗಳು : 80

**ಸೂಚನೆಗಳು :** *1) ಈ ಪ್ರಶ್ನೆಪತ್ರಿಕೆಯು ಒಟ್ಟು **38** ಪ್ರಶ್ನೆಗಳನ್ನು ಹೊಂದಿದೆ.*

*2) ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.*

*3) ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.*

*4) ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು **15** ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.*

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : **(8×1=8)**

1) ಭಾರತ ಮತ್ತು ಯುರೋಪಿನ ನಡುವೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಮೊದಲ ಯುರೋಪಿಯನ್ನರು

A) ಫ್ರೆಂಚರು B) ಪೋರ್ಚುಗೀಸರು

C) ಡಚ್ಚರು D) ಬ್ರಿಟಿಷರು

2) ಆರ್ಯ ಸಮಾಜದ ಸ್ಥಾಪಕರು

A) ರಾಜಾರಾಮ್ ಮೋಹನ್ ರಾಯ್ B) ಸ್ವಾಮಿ ವಿವೇಕಾನಂದ

C) ಜ್ಯೋತಿಬಾ ಫುಲೆ D) ದಯಾನಂದ ಸರಸ್ವತಿ

3) 'ಸಾರ್ವಜನಿಕ ಆಡಳಿತದ ಪಿತಾಮಹ'

A) ಲೂಥರ್ ಗುಲಿಕ್ B) ಎಲ್. ಡಿ. ವೈಟ್

C) ವುಡ್ರೋ ವಿಲ್ಸನ್ D) ಹರ್ಬರ್ಟ್ ಎ. ಸೈಮನ್

4) 'ಅಸ್ಪೃಶ್ಯತೆಯು ಹಿಂದೂ ಸಮಾಜಕ್ಕೆ ಅಂಟಿದ ಕಳಂಕ' ಎಂದು ಹೇಳಿದವರು

A) ಡಾ. ಬಿ. ಆರ್. ಅಂಬೇಡ್ಕರ್ B) ಮಹಾತ್ಮಾ ಗಾಂಧಿ

C) ಬಸವೇಶ್ವರ D) ಸ್ವಾಮಿ ವಿವೇಕಾನಂದ

P.T.O.

5) ಕೆಳಗಿನವುಗಳಲ್ಲಿ ಭಾರತದ ಪ್ರಸಿದ್ಧ ಗಿರಿಧಾಮ

A) ಚಕ್ರಾತ B) ನಾಗತಿಬ್ಬ

C) ಧವಳಗಿರಿ D) ಪೀರ್ ಪಂಜಾಲ್

6) ತುಂಗಭದ್ರಾ ಅಣೆಕಟ್ಟು ಉಂಟುಮಾಡುವ ಜಲಾಶಯ

A) ಪಂಪ ಸಾಗರ B) ರಾಮಪಾದ ಸಾಗರ

C) ಬಸವ ಸಾಗರ D) ಗೋವಿಂದ ಸಾಗರ

7) ನೀತಿ ಆಯೋಗ (NITI Ayog) ದ ನೇತೃತ್ವ ವಹಿಸುವವರು

A) ರಾಷ್ಟ್ರಪತಿ B) ಲೋಕಸಭೆಯ ಅಧ್ಯಕ್ಷರು

C) ಉಪ-ರಾಷ್ಟ್ರಪತಿ D) ಪ್ರಧಾನಮಂತ್ರಿ

8) ನವೀನನು ಹತ್ತು ವರ್ಷಗಳ ಬಳಿಕ ನಿವೇಶನವನ್ನು ಕೊಳ್ಳಲು ಪ್ರತಿ ತಿಂಗಳು ಹಣವನ್ನು ಉಳಿತಾಯ ಮಾಡಲು ಬಯಸುತ್ತಾನೆ. ಆತನು ತೆರೆಯಬೇಕಾದ ಸೂಕ್ತವಾದ ಬ್ಯಾಂಕ್ ಖಾತೆಯು

A) ಉಳಿತಾಯ ಖಾತೆ B) ಚಾಲ್ತಿ ಖಾತೆ

C) ಆವರ್ತ ಠೇವಣಿ ಖಾತೆ D) ನಿಶ್ಚಿತ ಠೇವಣಿ ಖಾತೆ

II. ಈ ಪ್ರತಿಯೊಂದು ಪ್ರಶ್ನೆಗೂ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : **(8×1=8)**

9) ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜೀನಾಮೆ ನೀಡಿ ಇಂಗ್ಲೆಂಡಿಗೆ ಮರಳಲು ಕಾರಣವೇನು ?

10) ಸರ್ ಸೈಯದ್ ಅಹ್ಮದ್ ಖಾನರು ಆಂಗ್ಲೋ-ಓರಿಯಂಟಲ್ ಕಾಲೇಜನ್ನು ಏಕೆ ಸ್ಥಾಪಿಸಿದರು ?

11) ಕೇಂದ್ರ ಲೋಕ ಸೇವಾ ಆಯೋಗದ ಅಧ್ಯಕ್ಷರನ್ನು ಯಾರು ನೇಮಕ ಮಾಡುತ್ತಾರೆ ?

12) ಭಾರತ ಸಂವಿಧಾನದ 17ನೇ ವಿಧಿಯ ಮಹತ್ವವೇನು ?

13) ಶ್ರಮ ವಿಭಜನೆ ಎಂದರೇನು ?

14) ಮಹಾಹಿಮಾಲಯವನ್ನು ಹಿಮಾದ್ರಿ ಎಂದು ಏಕೆ ಕರೆಯುತ್ತಾರೆ ?

15) ಸರ್ ಎಂ. ವಿಶ್ವೇಶ್ವರಯ್ಯರವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಕರೆಯಲಾಗುತ್ತದೆ. ಏಕೆ ?

16) ಭಾರತದಲ್ಲಿ ಯಾವ ಬ್ಯಾಂಕನ್ನು 'ಬ್ಯಾಂಕುಗಳ ಬ್ಯಾಂಕು' ಎಂದು ಕರೆಯಲಾಗುತ್ತದೆ ?

III. ಈ ಪ್ರತಿಯೊಂದು ಪ್ರಶ್ನೆಗೂ **ಎರಡರಿಂದ ನಾಲ್ಕು** ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ : **(8×2=16)**

17) ಸಾರ್ವಜನಿಕ ಆಡಳಿತವು ಜನರಿಗೆ ಜನನದಿಂದ ಮರಣದವರೆಗೆ ಅಗತ್ಯವಾದ ಸೇವೆಗಳನ್ನು ಒದಗಿಸುತ್ತದೆ. ಸ್ಪಷ್ಟೀಕರಿಸಿ.

**ಅಥವಾ**

ಭ್ರಷ್ಟಾಚಾರವು ಅನೇಕ ಋಣಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ. ಸ್ಪಷ್ಟೀಕರಿಸಿ.

18) ತಾರತಮ್ಯದಿಂದ ಉಂಟಾದ ಪೂರ್ವಾಗ್ರಹದ ಪರಿಣಾಮಗಳಾವುವು ?

**ಅಥವಾ**

ನಿರುದ್ಯೋಗದ ಪರಿಣಾಮಗಳಾವುವು ?

19) ಕಾನ್‌ಸ್ಟಂಟಿನೋಪಲ್ ನಗರದ ಪತನವು ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾಯಿತು. ಹೇಗೆ ?

20) ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣಕ್ಕಾಗಿ ಶ್ರೀ ನಾರಾಯಣ ಗುರು ಹೇಗೆ ಶ್ರಮಿಸಿದರು ?

21) ಭಾರತದಲ್ಲಿ ಕಂಡುಬರುವ ವಾಯುಗುಣದ ಋತುಮಾನಗಳು ಯಾವುವು ?

22) ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ಯೋಜನೆಗಳನ್ನು ಹೆಸರಿಸಿ.

23) ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ತಿಳಿಸಿ.

24) ಬ್ಯಾಂಕುಗಳ ವಿಧಗಳಾವುವು ?

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ : **(9×3=27)**

25) ಡಚ್ಚರ ವಿರುದ್ಧ ಮಾರ್ತಾಂಡವರ್ಮನ ಹೋರಾಟವನ್ನು ವಿವರಿಸಿ.

**ಅಥವಾ**

ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ವಿವರಿಸಿ.

26) ಭಾರತದ ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಗಳನ್ನು ವ್ಯತ್ಯಯಿಸಿ.

**ಅಥವಾ**

ಕಪ್ಪು ಮಣ್ಣು ಮತ್ತು ಮರುಭೂಮಿ ಮಣ್ಣುಗಳನ್ನು ವ್ಯತ್ಯಯಿಸಿ.

27) ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಆರ್ಥಿಕ ಪ್ರಗತಿಗೆ ಕಾರಣವಾದವು. ಹೇಗೆ ?

**ಅಥವಾ**

ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನಗಳು ಹಸಿರುಕ್ರಾಂತಿಗೆ ಪ್ರೇರಕವಾದವು. ಹೇಗೆ ?

28) ಬ್ಯಾಂಕಿನ ಗುಣಲಕ್ಷಣಗಳನ್ನು ವಿವರಿಸಿ.

**ಅಥವಾ**

ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನವನ್ನು ವಿವರಿಸಿ.

29) ಬ್ರಿಟಿಷರ ಕಾಲದಲ್ಲಿ ಭಾರತದ ಪೊಲೀಸ್ ವ್ಯವಸ್ಥೆಯಲ್ಲಾದ ಬದಲಾವಣೆಗಳನ್ನು ವಿಶ್ಲೇಷಿಸಿ.

30) ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವೇನು ?

31) ಲಿಂಗತ್ವ ಅಲ್ಪಸಂಖ್ಯಾತರ ಸಬಲೀಕರಣಕ್ಕಾಗಿ ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

32) ಅಸಂಘಟಿತ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಾವುವು ?

33) ಮಣ್ಣಿನ ಸವೆತವನ್ನು ತಡೆಗಟ್ಟುವುದು ಏಕೆ ಅವಶ್ಯಕವಾಗಿದೆ ?

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ : (4×4=16)

34) ಬ್ರಿಟಿಷ್ ಶಿಕ್ಷಣವು ಭಾರತೀಯರ ಮೇಲೆ ಬೀರಿದ ಪರಿಣಾಮಗಳನ್ನು ವಿವರಿಸಿ.

ಅಥವಾ

ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸಿ.

35) ಜ್ಯೋತಿಬಾ ಫುಲೆಯವರು ಸಮಾನತೆಯ ಆಧಾರದ ಮೇಲೆ ಹೊಸ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿದರು. ಸಮರ್ಥಿಸಿ.

36) ಭಾರತದಲ್ಲಿ ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸಲು ಕೈಗೊಳ್ಳಬಹುದಾದ ಕ್ರಮಗಳೇನು ?

37) ಅರಣ್ಯಗಳ ಮಹತ್ವವನ್ನು ವಿವರಿಸಿ.

VI. 38) ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : (1+4=5)

a) 82½° ಪೂರ್ವ ರೇಖಾಂಶ

b) ಮರುಭೂಮಿ ಮಣ್ಣಿನ ಪ್ರದೇಶ

c) ಸುಂದರಬನ

d) ಕೋಸಿ ಯೋಜನೆ

**ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ :**

(ಪ್ರಶ್ನೆ ಸಂಖ್ಯೆ 38ರ ಬದಲಿಗೆ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. 5